ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ,
ಚಿಕ್ಕಮಗಳೂರು.

ಎಂ.ವಿ.ಸಿ. ನಂ. 279/2024

ಪಿ.ಡಬ್ಲ್ಯೂ.1

ದಿನಾಂಕಃ 06.02.2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-

ನಾನು ಈ ದಿನ ನನ್ನ ಆದಾರ್ ಕಾರ್ಡ್ ನ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. (ಸದರಿ ದಾಖಲೆಯ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನೋಟರೈಸ್ಡ್ ಪ್ರತಿಯೊಂದಿಗೆ ತಾಳೆ ಮಾಡಿ ಸರಿ ಇದೆ ಎಂದು ಒಪ್ಪಿಕೊಂಡು ಮೂಲ ಪ್ರತಿಯನ್ನು ಸಾಕ್ಷಿದಾರರಿಗೆ ವಾಪಾಸು ಮಾಡಲಾಯಿತು). ಸದರಿ ದಾಖಲೆಯನ್ನು ನಿಪಿ 15 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕಾಗಿ ಪಾರ್ಥಿಸುತ್ತೇನೆ.

**ಪಾಟಿ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ನಾನು ನ್ಯಾನೋ ಕಾರ್ ನಲ್ಲಿ ಹೋಗುತ್ತಿದ್ದೆನು. ಸದರಿ ವಾಹನದ ಮಾಲಿಕರು ನನ್ನ ತಂಗಿ ವಿನಿ ಪರ್ನಾಂಡಿಸ್ ಇರುತ್ತಾರೆ. ಸದರಿ ದಿನ ಎದುರುದಾರರ ವಾಹನ ನನ್ನ ಕಾರ್ ನ ನಡುಭಾಗಕ್ಕೆ ಡಿಕ್ಕಿಪಡಿಸಿರುತ್ತದೆ.

ಅಪಘಾತದ ನಂತರ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇನೆ. ನಂತರ ಕೆ.ಎಸ್ ಹೆಗ್ಗಡೆ ಆಸ್ಪತ್ರೆ ಮಂಗಳೂರಿಗೆ,

ಹೋಗಿರುತ್ತೇನೆ. ನಾನು ಸದರಿ ಆಸ್ಪತ್ರೆಯಲ್ಲಿ ಸುಮಾರು 10-11 ದಿನ ಒಳರೋಗಿಯಾಗಿ ದಾಖಲಾಗಿದ್ದೆನು. ನಾನು ದಿಃ 18.06.2023 ರಿಂದ ದಿಃ 29.06.2023 ರವರೆಗೆ ಒಳರೋಗಿಯಾಗಿ ದಾಖಲಾಗಿದ್ದೆನು ಎಂದರೆ ಸರಿ. ನನಗೆ ಶಸ್ತ್ರಚಿಕಿತ್ಸೆ ಆಗಿರುವುದಿಲ್ಲ, ಆದರೆ ಕ್ಲಾವಿಕಲ್ ಇಂಜುರಿ ಆಗಿರುತ್ತದೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿ ಇದ್ದುದರಿಂದ ಹಾಗೂ ನನಗೆ ಏಳಲು ಆಗದೇ ಇದ್ದುರಿಂದ ನಾನು ದೂರನ್ನು ನೀಡಿರುವುದಿಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ ಇಬ್ಬರು ಮಕ್ಕಳು ಇರುತ್ತೇವೆ. ಮಕ್ಕಳು ಓದುತ್ತಿದ್ದಾರೆ. ಅವರಲ್ಲಿ ಒಬ್ಬ ಪಿ.ಯು.ಸಿ. ಹಾಗೂ ಇನ್ನೊಬ್ಬ 8 ನೇ ತರಗತಿಯಲ್ಲಿ ಓದುತ್ತಿದ್ದಾನೆ.

ನಾನು ದಿಃ 05.09.202 ರಂದು ಖಾಸಗಿ ಫಿರ್ಯಾದನ್ನು ಸಲ್ಲಿಸಿದ್ದೆನು ಎಂದರೆ ಸರಿ. ನನಗೆ ಏಳಲು ಆಗದೇ ಇದ್ದುದರಿಂದ ನನಗೆ ದೂರನ್ನು ನೀಡಲು ಆಗಿರಲಿಲ್ಲ. ನನ್ನ ದೂರಿನಲ್ಲಿ ಅಪಘಾತಪಡಿಸಿದ ವಾಹನದ ಸಂಖ್ಯೆ ಕೆಎ-04-ಎ-7212 ಎಂದು ನೀಡಿರುತ್ತೇನೆ ಎಂದರೆ ಸಾಕ್ಷಿದಾರರು ಅದು ಟೈಪಿಂಗ್ ಮಿಸ್ಟೇಕ್ ನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪಘಾತವು ರಸ್ತೆಯ ಮಧ್ಯ ಭಾಗದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ.

ನಾನು ಡಿಸ್ಚಾರ್ಜ್ ಬಿಲ್ ನ್ನು ಹಾಜರುಪಡಿಸಿರುತ್ತೇನೆ. ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. ನನಗೆ ಚಾಲನಾಪತ್ರ ಇರುತ್ತದೆ. ನನಗೆ ತಿಂಗಳಿಗೆ 30 ಸಾವಿರ ಚಾಲಕನಾಗಿ ಹಾಗೂ ವ್ಯವಸಾಯದಿಂದ ಇತರ ಆದಾಯ ಬರುತ್ತಿತ್ತು. ನನಗೆ ಚಾಲಕನಾಗಿ ತಿಂಗಳಿಗೆ 30 ಸಾವಿರ ಆದಾಯ ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನಗೆ ವ್ಯವಸಾಯ ಇದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ವ್ಯವಸಾಯದಿಂದ ನನಗೆ ಈಗಲೂ ಆದಾಯ ಬರುತ್ತಿದೆ ಎಂದರೆ ಸರಿ. ನಾನು ಡಾ. ಶ್ರೀನಿವಾಸ್ ಮೂರ್ತಿರವರ ಬಳಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಮುಂದುವರೆದ ಚಿಕಿತ್ಸೆಗೆ ದಿಃ 09.06.2025 ರವರೆಗೆ ಡಾ. ಶ್ರೀನಿವಾಸ್ ಮೂರ್ತಿ ರವರ ಬಳಿ ಹೋದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ಮತ್ತು 10 ನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ ನಾನು ದೂರನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ (1 ಮತ್ತು 2 ನೇ ಎದುರುದಾರರ ಪರ ವಕೀಲರು 3 ನೇ ಎದುರುದಾರರ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿದೆ).

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ, ಚಿಕ್ಕಮಗಳೂರು.

ಎಸ್‌ಆರ್ಃ

MVC No. 279/2024
PW-1